ಇದರಲ್ಲಿ (ಬೇಡಿಕೆ 12) ಅಳವಡಿಸಿದ್ದು ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿತ್ತು. ಸಂಧಾನದ ಹಲವಾರು ಬೇಡಿಕೆಗಳನ್ನು ಸರ್ಕಾರದ ಹಲವು ಹಂತಗಳಲ್ಲಿ ಚರ್ಚಿಸಿದ್ದಲ್ಲದೆ ಮಾನ್ಯ ರೇಷ್ಮೆ ಮಂತ್ರಿಗಳ ಅಧ್ಯಕ್ಷತೆಯಲ್ಲಿಯೂ ಸಹ ಚರ್ಚಿಸಲಾಯಿತು. ಈ ಸಭೆಯಲ್ಲಿ ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಟಿ.ಸಿ. ಜಯಚಂದ್ರ ಇವರು ಪಾಲ್ಗೊಂಡಿದ್ದರು.

ಸಂಧಾನದ ಹಲವಾರು ಬೇಡಿಕೆಗಳನ್ನು ಸರ್ಕಾರವು ಈಗಾಗಲೇ ಒಪ್ಪಿ ಆದೇಶಿಸಿದ್ದು, ಮೇಲ್ಕಂಡ ಇತರೆ ಕೆಲಸಗಾರರ ವೇತನ ಶ್ರೇಣಿಯ ಬಗ್ಗೆ ಸರ್ಕಾರದ ವಿವಿಧ ಇಲಾಖೆಗಳ ತೀವ್ರ ಪರಿಶೀಲನೆಯಲ್ಲಿದೆ.

4) **ರಾಜ್ಯದ ಕಾರಾಗೃಹದಲ್ಲಿ 10 ರಿಂದ 13 ವರ್ಷ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಖೈದಿಗಳನ್ನು ಡಾ|| ಅಂಬೇಡ್ಕರ್ ಜನ್ಮಶತಾಬ್ದಿಯಂದು ಮಾನವೀಯತೆ ದೃಷ್ಟಿಯಿಂದ ಬಿಡುಗಡೆ.**

ಶ್ರೀ ಎಚ್. ಎಂ. ರೇವಣ್ಣ (ಮಾಗಡಿ):- ಮಾನ್ಯ ಉಪಾಧ್ಯಕ್ಷರೇ, ರಾಜ್ಯದ ಕಾರಾಗೃಹದಲ್ಲಿ ಜೀವಾವಧಿ ಶಿಕ್ಷೆಗೆ ಒಳಗಾಗಿರುವ ಖೈದಿಗಳು ಈಗಾಗಲೇ 10 ರಿಂದ 13 ವರ್ಷಗಳನ್ನೂ ಕಾರಾಗೃಹಗಳಲ್ಲಿ ಒಳ್ಳೆಯ ನಡತೆಯಿಂದ ಪೂರೈಸಿರುವುದರಿಂದ ಈ ವರ್ಷ ಡಾ: ಬಿ.ಆರ್. ಅಂಬೇಡ್ಕರ್ ಅವರ ಜನ್ಮಶತಾಬ್ದಿಯನ್ನು ಆಚರಿಸುವುದರಿಂದ ಈ ಖೈದಿಗಳನ್ನು ಮಾನವೀಯತೆ ದೃಷ್ಟಿಯಿಂದ ಹಾಗೂ ಸಮಾಜದಲ್ಲಿ ಅವರ ಜೀವನವನ್ನು ಹಸನುಮಾಡಿಕೊಂಡು ಬಾಳಲು ಅವರುಗಳನ್ನು ಬಿಡುಗಡೆ ಮಾಡಬೇಕೆಂಬ ಸರ್ಕಾರವನ್ನು ಕೋರುತ್ತೇನೆ. ಇದರ ಜೊತೆಗೆ ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ಶಿಕ್ಷೆ ಅನುಭವಿಸುತ್ತಿರುವ ಖೈದಿಗಳ ಪಟ್ಟಿಯನ್ನೂ ಕಳುಹಿಸಿಕೊಟ್ಟಿರುತ್ತೇನೆ.

ಶ್ರೀ ಡಿ. ಕೆ. ಶಿವಕುಮಾರ್ (ಬಂಧಿಖಾನೆ ಮತ್ತು ಗೃಹ ರಕ್ಷಕ ದಳದ ರಾಜ್ಯ ಸಚಿವರು):- ಮಾನ್ಯ ಉಪಾಧ್ಯಕ್ಷೀಣಿಯವರೇ,

ದಿನಾಂಕ: 15-2-1992ರಂದು ರಾಜ್ಯದ ಕೇಂದ್ರ ಕಾರಾಗೃಹಗಳಲ್ಲಿ ಜೀವಾವಧಿ ಶಿಕ್ಷೆಗೆ ಒಳಗಾದ ಖೈದಿಗಳು 10 ವರ್ಷದ ಮೇಲ್ಪಟ್ಟು ಜೈಲು ಶಿಕ್ಷೆಯನ್ನು ಅನುಭವಿಸುತ್ತಿರುವವರು 234 ಮಂದಿ ಇದ್ದಾರೆ. ಈ ಪೈಕಿ 228 ಪುರುಷ ಖೈದಿ ಮತ್ತು 6 ಮಹಿಳಾ ಖೈದಿಗಳು.

ದಿನಾಂಕ: 18-12-1978ರ ಹಿಂದೆ ಶಿಕ್ಷೆಯಾದ ಜೀವಾವಧಿ ಬಂಧಿಗಳನ್ನು ವಿಚಾರಣಾ ಅವಧಿಯು ಸೇರಿ 10 ವರ್ಷ ಸಜೆ ತೀರಿದ ನಂತರ ಅವರ ಒಳ್ಳೆಯ ನಡತೆ, ಪ್ರಾಮಾಣಿಕತೆ ಸುಧಾರಣಾ ಮನೋಭಾವನೆಗಳನ್ನು ಪರಿಗಣಿಸಿ ಹಾಗೂ ಸಲಹಾ ಮಂಡಳಿಯಿಂದ ಶಿಫಾರಸ್ಸಾಗಿ ಬಂದ ಬಂಧಿಗಳನ್ನು ಸರ್ಕಾರವು ಬಿಡುಗಡೆ ಮಾಡುತ್ತಿತ್ತು. ಆದರೆ ದಂಡ ಪ್ರಕ್ರಿಯೆ ಸಂಹಿತೆ 433(ಎ)ಗೆ ದಿನಾಂಕ: 18-12-1978ರಂದು ಕೇಂದ್ರ ಸರ್ಕಾರವು ತಿದ್ದುಪಡಿ ಮಾಡಿದ ನಂತರ, ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಬಂಧಿಗಳನ್ನು ವಿಚಾರಣಾ ಅವಧಿಯು ಸೇರಿ 14 ವರ್ಷ ಸಜೆ ತೀರಿದ ನಂತರ ಮಾತ್ರ ಬಿಡುಗಡೆಗೆ ಪರಿಶೀಲನೆ ಮಾಡಬೇಕಾಗುತ್ತದೆ. ಇತ್ತೀಚೆಗೆ ಡಾ: ಬಿ.ಆರ್. ಅಂಬೇಡ್ಕರ್ ಅವರ ಜನ್ಮ ಶತಾಬ್ದಿಯ ಅಂಗವಾಗಿ ರಾಜ್ಯ ಸರ್ಕಾರವು ದಿನಾಂಕ: 18-12-1978ರ ಹಿಂದೆ ಜೀವಾವಧಿ ಶಿಕ್ಷೆಗೆ ಒಳಗಾದ ಎಲ್ಲಾ ಹೆಣ್ಣೊಂದು ಬಂಧಿಗಳನ್ನು ಬಿಡುಗಡೆ ಮಾಡಲಾಗಿದೆ. ಇದಲ್ಲದೆ ಜೀವಾವಧಿ ಶಿಕ್ಷೆಗೆ ಒಳಗಾದ ವಿಚಾರಣಾ ಅವಧಿಯು ಸೇರಿ ೧೦ ವರ್ಷ ಸಜೆ ಮುಗಿಸಿದ ನಂತರ ಬಿಡುಗಡೆ ಮಾಡಲು ಅನುಕೂಲವಾಗುವಂತೆ ಸರ್ಕಾರವು ದಂಡ ಪ್ರಕ್ರಿಯೆ ಸಂಹಿತೆ 433(ಎ) ನಿಯಮಕ್ಕೆ ತಿದ್ದುಪಡಿ ಮಾಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದ್ದು, ಪ್ರಸ್ತುತ ಇದನ್ನು ಕಾನೂನು ಇಲಾಖೆಯ ಪರಿಶೀಲನಾ ಸಮಿತಿಯು ಪರಿಶೀಲಿಸುತ್ತಿದೆ.

5) ಸಿಂಧಗಿ ತಾಲ್ಲೂಕಿನ ಕುಮಸಿ ಗ್ರಾಮದ ಸೇವಾ ಸಹಕಾರಿ ಸಂಘದಲ್ಲಿ ಕಾರ್ಯದರ್ಶಿಯವರಿಂದ ಅವ್ಯವಹಾರ.

ಶ್ರೀ ಆರ್. ಬಿ. ಚೌಧರಿ (ಸಿಂಧಗಿ):- ಮಾನ್ಯ ಉಪಾಧ್ಯಕ್ಷೀಣಿಯವರೇ, ಸಿಂಧಗಿ ತಾಲ್ಲೂಕಿನ ಕುಮಸಿ ಗ್ರಾಮದ ಸೇವಾ ಸಹಕಾರಿ ಸಂಘಕ್ಕೆ ಚುನಾವಣೆ ನಿಯಮದ ಪ್ರಕಾರ 27.2.90 ರಂದು ಜರುಗಿದ ಸರ್ವಸದಸ್ಯರ ಮಹಾಸಭೆಯಲ್ಲಿ ಆಡಳಿತ ಮಂಡಳಿ ಚುನಾಯಿತವಾಯಿತು. ಆದರ ಕಾರ್ಯದರ್ಶಿ ಶ್ರೀ ಬಿರಾದಾರ ಇವರು ಹಾಜರಾಗದೇ ಆಡಳಿತ ಸದಸ್ಯರುಗಳ ಸಭೆ ಜರುಗಿತು. ಶ್ರೀ ಬಿರಾದಾರ್ ಹಾಗೂ ಚೇರಮನ್ ಶ್ರೀ ಎಸ್.ಎಸ್. ಪಾಟೀಲ್ ಇಬ್ಬರೂ ಶಾಮೀಲಾಗಿ 90,000-00 ರೂ. ಹಣ ದುರುಪಯೋಗವಲ್ಲದೇ ಇನ್ನಿತರ ಅವ್ಯವಹಾರ ಕೂಡ ಮಾಡಿದ್ದಾರೆ. ಆದ್ದರಿಂದ ಕಾರ್ಯದರ್ಶಿಯು ಇದನ್ನು ಮುಚ್ಚಿಕೊಳ್ಳಲು ಚುನಾವಣೆ ನಡೆಯಲ್ಲವೆಂದು ಪೊಟ್ಟಿ ವರದಿ ಮಾಡಿ ಕರ್ನಾಟಕ ಸಹಕಾರಿ ಸಂಘಗಳ ನಿಯಮ 18ಎ8ರ ಪ್ರಕಾರ ಅಪರಾಧಿಯಾಗಿದ್ದಾನೆ. ಇವನನ್ನು 15 ದಿವಸದೊಳಗೆ ಚೇರಮನ್‌ರ ಅಯ್ಕೆಗಾಗಿ ಸಭೆ ಕರೆಯುವಂತೆ ಕರ್ನಾಟಕ ಸಹಕಾರಿ ಸಂಘಗಳ 190() ನಿಯಮ

14ಎ ಯನ್ನು ಉಲ್ಲಂಘಿಸಿದ್ದಾನೆ. ಇದರ ಬಗ್ಗೆ ಸಹಾಯಕ ನಿಬಂಧಕರು ವಿಚಾರಣಾಧಿಕಾರಿಯಾಗಿ ನೇಮಕಗೊಂಡಿದ್ದ 3 ಜನ ಸದಸ್ಯರೊಡಗೂಡಿ ಇವನಿಗೆ ವರ್ಗ ಮಾತಿದರೂ ಹೋಗದೆ ರಾಜಕಾರಣ ಮಾಡಿಕೊಂಡು ತಿರುಗುತ್ತಿದ್ದಾನೆ. ಸೆಕ್ರೆಂಡ್ ಆದರೂ ಕೂಡ ಮತ್ತೆ ಉಪನಿಬಂಧಕರೂ ಹಾಗೂ ಡಿ.ಸಿ.ಸಿ. ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರುಗಳ ಸಹಾಯದಿಂದ ಅಲ್ಲಿಯೇ ಮತ್ತೆ ಮುಂದುವರೆದಿದ್ದಾನೆ.

ನಾನು ಉಪನಿಬಂಧಕರಿಗೆ ಖುದ್ದಾಗಿ ಬೇಟ್ಟಿಯಾದರೆ ನನಗೆ ತಪ್ಪು ಮಾಹಿತಿ ನೀಡಿ ಕೋರ್ಟು ಪುನಃ ಚುನಾವಣೆ ಮಾಡಲು ಆದೇಶ ನೀಡಿದೆ ಎಂದು ಸುಳ್ಳುಹೇಳಿ ಕೋರ್ಟು ಸೇರಲು ಬೇಡಿದರೆ ಕೊಡಲು ನಿರಾಕರಿಸಿದ್ದಾನೆ. ಒಬ್ಬ ಶಾಸಕನ ಪರಿಸ್ಥಿತಿ ಹೀಗಾದರೆ ಜನ ಸಾಮಾನ್ಯರ ಪಾಡೇನು? ಇಷ್ಟೊಂದು ಅಪರಾಧ ಮಾಡಿದ ಕಾರ್ಯದರ್ಶಿ ಬಿರಾದಾರ ಹಾಗೂ ಅವನನ್ನು ರಕ್ಷಿಸುವ ಅಧಿಕಾರಿಗಳು ಒಬ್ಬರಿಗೊಬ್ಬರು ಸಂಬಂಧಿಕರೆಂದು ತಿಳಿದುಬಂದಿದೆ. ಹಾಗೂ ಉಪನಿಬಂಧಕರು ಸಹಕಾರಿ ಕ್ಷೇತ್ರದಲ್ಲಿ ನಾನು ಮಾಡಿದ್ದೇ ಮಾರ್ಗವೆಂದು ಎಲ್ಲರೆದುರು ಹೇಳಹತ್ತಿದ್ದಾನೆ. ಕೂಡಲೇ ಕಾರ್ಯದರ್ಶಿ ಬಿರಾದಾರ ಹಾಗೂ ಉಪನಿಬಂಧಕರು, ಬೀಜಾಪೂರ ಇವರನ್ನು ಆಮಾನತ್ತಿನಲ್ಲಿ ಇಟ್ಟು ಸೂಕ್ತ ತನಿಖೆ ಮಾಡಿಸದಿದ್ದರೆ ಜನರ ಬಂಡೇಳುವುದರಲ್ಲಿ ಸಂಶಯವಿಲ್ಲ. ಸರಕಾರ ಇದರ ಬಗ್ಗೆ ಸೂಕ್ತ ಕ್ರಮ ಜರುಗಿಸುವುದೇ?

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೆ, ಸಿಂಧಗಿ ತಾಲ್ಲೂಕಿನ ಕುಮಸಿ ಗ್ರಾಮದ ಸೇವಾ ಸಂಘದ ವ್ಯವಹಾರಗಳು ವ್ಯವಸ್ಥಿತವಾಗಿ ನಡೆಯುತ್ತಿಲ್ಲ ಎನ್ನುವುದು ತಿಳಿದುಬಂದಿದೆ. ಈ ಸಂಘದ ಕಾರ್ಯದರ್ಶಿ ಶ್ರೀ ಬಿರಾದಾರ ಸಂಸ್ಥೆಗ ಕೆಲಸಗಳನ್ನು ಸರಿಯಾಗಿ ನಿರ್ವಹಿಸುತ್ತಿಲ್ಲದಿರುವುದು ನಿಜವಿರುತ್ತದೆ. ಸಂಘಕ್ಕೆ ರೂ. 73,000 ಗೋಡಾನ್ ಕಟ್ಟಲು ಹಣ ಮಂಜೂರಾಗಿದ್ದು ಕಟ್ಟಡ ಕಟ್ಟಿರುವುದಿಲ್ಲ. ಕೇವಲ ತಕ್ತಾಯದ ಕೆಲಸ ಮಾತ್ರ ನಡೆದಿದ್ದು ಬಿಡುವ ಅಪರತಪರ ಆಗಿದೆ ಎಂದು ತಿಳಿದು ಬಂದಿದೆ. ಕಾರ್ಯದರ್ಶಿಯನ್ನು ಕಾಮನ್ ಕೇಡರ್ ಅಥಾರಿಟಿ ಆಮಾನತ್ತುಗೊಳಿಸಿ ಮತ್ತೆ ಅದೇ ಸಂಘದಲ್ಲಿ ನೇಮಿಸಲಾಗಿದೆ ಎಂದು ತಿಳಿದು ಬಂದಿದೆ. ಈ ಎಲ್ಲಾ ಲೋಪದೋಷಗಳ ಬಗ್ಗೆ ವಿವರಗಳನ್ನು ತಿಳಿಯಲು ಹಾಗೂ ನಿರ್ದಿಷ್ಟವಾಗಿ ಜವಾಬ್ದಾರರನ್ನು ಗುರುತಿಸಲು ಸಾಧ್ಯವಾಗುವಂತೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಇಂಡಿ ಉಪ ವಿಭಾಗ ಇವರು ಸಹಕಾರ ಸಂಘಗಳ ಕಾಯಿದೆ 1959ರ ಕಲಂ 64ರ ರೀತಿ ವಿಚಾರಣೆಗೆ ಈಗಾಗಲೇ ಆದೇಶ ಮಾಡಿರುತ್ತಾರೆ. ವಿಚಾರಣೆ ವರದಿ ಬಂದ ನಂತರ ತಪ್ಪಿತಸ್ಥರ ಮೇಲೆ ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

2. ಚುನಾವಣೆ ನಂತರ ಅಧ್ಯಕ್ಷರ ಆಯ್ಕೆ ಮಾಡಲು ಸಭೆ ಕರೆಯುವ ಬಗ್ಗೆ ಕಾರ್ಯದರ್ಶಿ ವಿಫಲನಾಗಿದ್ದರೆ ಸಹಕಾರ ಕಾಯಿದೆ ಕಲಂ 29 ಎ (4)ರ ನೀತಿ ಕ್ರಮ ತೆಗೆದುಕೊಳ್ಳಲು ಕೂಡಲೆ ವ್ಯವಸ್ಥೆ ಮಾಡಲಾಗುವುದು.

3. ಉಪ ನಿಬಂಧಕರು ಮಾನ್ಯ ಶಾಸಕರಿಗೆ ಸುಳ್ಳು ಹೇಳಿದ್ದಾರೆ ಹಾಗೂ ದಾಖಲೆ ಕೊಡದೆ ದುರ್ವರ್ತನೆ ಮಾಡಿದ್ದಾರೆ ಎನ್ನುವ ಗಂಭೀರ ಆರೋಪದ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು.

ಉಪಾಧ್ಯಕ್ಷರು:- ಈಗ ಸದನವು ಮುಂದೂಡಲ್ಪಟ್ಟು ಮತ್ತೆ 2-30ಕ್ಕೆ ಸಮಾವೇಶಗೊಳ್ಳುತ್ತದೆ.

ಸದನವು, ಮಧ್ಯಾಹ್ನ 1-36ಕ್ಕೆ ಮುಕ್ತಾಯಗೊಂಡು,

ಮತ್ತೆ, ಅದೇ ದಿನ ಮಧ್ಯಾಹ್ನ 2-30ಕ್ಕೆ ಸೇರಲು ನಿಶ್ಚಯಿಸಿತು.

(ಸದನವು ಮಧ್ಯಾಹ್ನ 4-10ಕ್ಕೆ ಸಮಾವೇಶಗೊಂಡಿತು)

(ಅಧ್ಯಕ್ಷರು (ಶ್ರೀಮತಿ ಎಂ.ಕೃಷ್ಣ) ಆಧ್ಯಕ್ಷ ಪೀಠವನ್ನಲಂಕರಿಸಿದರು)

1992-93ರ ಆಯವ್ಯಯ ಪತ್ರವನ್ನು ಸದನದಲ್ಲಿ ಮಂಡಿಸುವುದಕ್ಕೆ ಮೊದಲು ಬಹಿರಂಗವಾಗಿರುವ ಬಗ್ಗೆ ಚರ್ಚೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಸಭಾಧ್ಯಕ್ಷರೆ, ನಾನು ವಿಷಯಕ್ಕೆ ಸಂಬಂಧಿಸಿದ ಕಾರ್ಯಕಲಾಪಗಳು ಮುಗಿಯುವುದಕ್ಕೆ ಮುನ್ನವೇ 145ನೇ ವಿಧಿಯನ್ವಯ ಕಾರ್ಯಕಲಾಪಗಳು ಪ್ರಾರಂಭವಾಗುವುದಕ್ಕೆ ಮುನ್ನವೆ ನಾನು ಕೊಟ್ಟಿರುವ ನೋಟೀಸಿನ ಪ್ರಾಮುಖ್ಯತೆಯನ್ನು ಗಮನಿಸಿ ಅವಕಾಶವನ್ನು ಕೊಡಬೇಕೆಂದು ತಮ್ಮನ್ನು ಪ್ರಾರ್ಥನೆ ಮಾಡಿಕೊಂಡ. ಇತ್ತೀಚೆಗೆ ಈ ದಿನದ ಕಾರ್ಯಕಲಾಪದ ಸೂಚಿಯಲ್ಲಿ ಈಸಾರಿ ಆಯವ್ಯಯದ ಚರ್ಚೆಯನ್ನು ಪ್ರಾರಂಭ ಮಾಡತಕ್ಕಂಥ ವಿಚಾರ ಕೂಡ ಪ್ರಸ್ತಾಪವಾಗಿತ್ತು. ಅದೂ ಕೂಡ ನನ್ನ ದೃಷ್ಟಿಯಲ್ಲಿ ಸರಿ ಇಲ್ಲವೆಂದು